63 (245) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ರಾಜ್ಯದಲ್ಲಿ ಖಾದಿ ಬಟ್ಟೆಗೆ ರಿಯಾಯಿತಿ ನೀಡಿದೆಯೇ;

ಆ) ನೀಡಿದ್ದಲ್ಲಿ, ಖಾದಿ ಬಟ್ಟೆ ತಯಾರಕರು ಹಾಗೂ ಮಾರಾಟಗಾರರಿಗೆ ರಿಯಾಯಿತಿ ಹಣವನ್ನು ಬಿಡುಗಡೆ ಮಾಡಲಾಗಿದೆಯೇ;

ಇ) ಕಳೆದ 2 ವರ್ಷಗಳಿಂದ ಸರ್ಕಾರ ಘೋಷಿಸಿದ್ದ ಖಾದಿ ಬಟ್ಟೆ ಮಾರಾಟದ ರಿಯಾಯಿತಿ ಹಣವು ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ನೀಡಬೇಕಾದ ಹಣವೆಷ್ಟು;

ಉ) ಈ ಬಾಕಿ ಹಣವನ್ನು ಎಂದು ಬಿಡುಗಡೆ ಮಾಡಲಾಗುವುದು?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) :

ಅ) ಹೌದು.

ಆ) ಖಾದಿ ಬಟ್ಟೆ ತಯಾರಕರು ಹಾಗೂ ಮಾರಾಟಗಾರರಿಗೆ ರಿಯಾಯಿತಿ ಹಣವನ್ನು ಬಿಡುಗಡೆ ಮಾಡಲಾಗಿದೆ.

ಇ) ಸರ್ಕಾರವು ಘೋಷಿಸಿದ್ದ ಖಾದಿ ಬಟ್ಟೆ ಮಾರಾಟದ ರಿಯಾಯಿತಿ ಹಣವನ್ನು ಬಿಡುಗಡೆ ಮಾಡಿದ ವಿವರಗಳು ಕೆಳಕಂಡಂತಿದೆ:

ವರ್ಷ	ಸರ್ಕಾರ ಬಿಡುಗಡೆ ಮಾಡಿದ ಮೊತ್ತ ರೂ.ಲಕ್ಷಗಳಲ್ಲಿ
2007–08	742.00
2008–09	300.00
2009–10	325.00
ಒಟ್ಟು	**1367.00**

ಈ) ದಿನಾಂಕ: 31–03–2009ರ ಅಂತ್ಯಕ್ಕೆ ಬಿಡುಗಡೆಗೆ ಬಾಕಿ ಇರುವ ಮೊತ್ತ ರೂ. 639.74 ಲಕ್ಷ.

ಉ) ಬಾಕಿ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.